Sri K. PUTTASWAMY.—The amount is not available.

Sri N. O. SAMAJI (In Marathi) [*Translated*].—Why the applications have not been sanctioned. What is the name of the applicants)

Mr. SPEAKER.—Such supplementaries should not be put. Is there any limit for such supplementaries? The supplementary now asked is not very good.

Sri N. O. SAMAJI (Marathi) [*Translated*].—(The reasons for rejection of the application).

Sri K. PUTTASWAMY.—The reasons for rejection will have been informed to the Primary Bank.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬರುವ ಅರ್ಜಿಗಳನ್ನು ಇಷ್ಟು ದಿವಸಗಳಲ್ಲಿ ತೀರ್ಮಾನ ಮಾಡ ಬೇಕೆಂದೇನಾದರೂ ಆದೇಶ ಕೊಡಲಾಗಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಸಾಮಾನ್ಯವಾಗಿ ಎರಡು ತಿಂಗಳಲ್ಲಿ ತೀರ್ಮಾನ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಾಗೆ ಎರಡು ತಿಂಗಳಲ್ಲಿ ವಿಲೆಮಾಡದಿದ್ದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವರೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಬಾವಿಗೆ ಸಾಲ ಬೇಕಾದವರು ಅದಕ್ಕೆ ಬೇಕಾದ ಮಾಹಿತಿ ಕೊಟ್ಟು ಅರ್ಜಿ ಕೊಡಬಹುದು. ಟೈಟಲ್ ಸರಿಯಾಗಿದ್ದು ಬೇಕಾದ ಮಾಹಿತಿ ಒದಗಿಸಿದ್ದರೆ ಎರಡು ತಿಂಗಳಲ್ಲಿ ಸಾಲ ಕೊಡಲು ಸಾಧ್ಯವಾಗುತ್ತದೆ.

Installation of Irrigation Pumpsets.

*Q.—92. Sri B. L. GOWDA (Challakere).—

Will the Government be pleased to state :—

(*a*) whether it has come to their notice that some persons have installed irrigation pumpsets to the Vani Vilas Sagar Channel in Hiriyur Taluk of Chitradurga District;

(*b*) of these pumpsets how many of them are authorised and how many of them are unauthorised;

(*c*) whether it has come to the notice of Government that these pumpsets have come in the way of sufficient supply of water to the atchkatdars in the tail-end;

(*d*) whether any of those tail-end atchkatdars issued notices to Government claiming compensation for the loss of crops due to insufficient supply of water;

(*e*) the action taken by them in this behalf?

A.—Sri ALUR HANUMANTHAPPA (Deputy Minister for Minor Irrigation).—

(*a*) Yes.

(*b*) Authorised pumpsets—97.
Unauthorised pumpsets—59.

(*c*) These pumpsets have not come in the way of sufficient supply of water to tail-end atchkatdars.

(*d*) Yes.

(*e*) No loss to crops.

ಶ್ರೀ ಬಿ. ಎಲ್. ಗೌಡ.—ವಾಣೀವಿಲಾಸ ಸಾಗರ ನಾಲೆಗೆ ಅನಧಿಕೃತ ಪಂಪ್ ಸೆಟ್‌ಗಳನ್ನು ಹಾಕಿದ್ದಾರೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ! ಅದು ಸರ್ಕಾರದ ಗಮನಕ್ಕೆ ಬಂದ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ?

† ಶ್ರೀ ಆಲೂರು ಹನುಮಂತಪ್ಪ.—ಇತ್ತೀಚೆಗೆ ಒಂದು, ಒಂದೂವರೆ ವರ್ಷದಿಂದ ಬಂದಿವೆ. ಅಚ್ಚುಕಟ್ಟುದಾರರು ಬಹಳ ಖರ್ಚುಮಾಡಿ ಪಂಪ್‌ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ. ಅವರ ಮೇಲೆ ತಕ್ಷಣ ಕ್ರಮ ತೆಗೆದುಕೊಂಡು ಅವರನ್ನು ನಿರಾಶವಂತರನ್ನಾಗಿ ಮಾಡುವುದಕ್ಕಾಗುವುದಿಲ್ಲ. ಈಗ ಎಗಚಿ ಹೊಳೆಯ ನೀರನ್ನು ವಾಣೀವಿಲಾಸ ಸಾಗರಕ್ಕೆ ಡೈವರ್ಟ್ ಮಾಡಿ ಹಿರಿಯೂರು ತಾಲ್ಲೂಕಿನ ವರಿಗೆ ಹೆಚ್ಚು ನೀರನ್ನು ಕೊಡಿಸುವ ಒಂದು ಯೋಜನೆಯನ್ನು ಸಿದ್ಧಮಾಡುತ್ತಿದ್ದೇವೆ. ಆಗ ಅಲ್ಲಿಯ ಜನಗಳ ಕಷ್ಟಗಳು ನಿವಾರಣೆಯಾಗುತ್ತದೆ.

ಶ್ರೀ ಬಿ. ಎಲ್. ಗೌಡ.—ವಾಣೀವಿಲಾಸ ಸಾಗರದ ಅಚ್ಚುಕಟ್ಟಿನ ಕೆಳಗಿರುವ ರೈತರಿಗೆ ಹೋದವರ್ಷ ಮತ್ತು ಅದರ ಹಿಂದಿನ ವರ್ಷ ಫಸಲು ಲಕ್ಷಾನಾಗಿ ಬಹಳ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಮಳೆ ಇಲ್ಲದೆ ಇರುವ ವರ್ಷಗಳಲ್ಲಿ ಸ್ವಲ್ಪ ಕಷ್ಟವಾಗುತ್ತದೆ. ನಾವು "Eight days on and ten days' off" ಎಂಬ ಒಂದು ಪಾಲಿಸಿ ಮಾಡಿಕೊಂಡು ಟೇಲ್‌ಎಂಡ್‌ನಲ್ಲಿರುವ ಅಚ್ಚುಕಟ್ಟುದಾರರಿಗೂ ನೀರನ್ನು ಒದಗಿಸುವ ಏರ್ಪಾಡನ್ನು ಹಾಕಿಕೊಂಡಿದ್ದೇವೆ.

ಶ್ರೀ ಸಿದ್ದಯ್ಯ ಕಾಶಿಮಠ್.—ನಾಲೆಗಳಿಗೆ ಪಂಪ್‌ಸೆಟ್ಟುಗಳನ್ನು ಹಾಕಿಕೊಳ್ಳಲು ಬೇರೆ ಪ್ರದೇಶಗಳಿಗೆ ಏನಾದರೂ ಪರ್‌ಮಿಷನ್ ಕೊಟ್ಟಿದ್ದಿರಾ?

Sri ALUR HANUMANTHAPPA.—When we contemplated this, the Atchkat was not fully developed, and hence Government itself took the initiative to allow pumpsets to be installed to the channel.

ಶ್ರೀ ಬಿ. ಎಲ್. ಗೌಡ.—ಎಷ್ಟು ಎಕರೆಗೆ ನೀರನ್ನು ಒದಗಿಸಬಹುದೆಂದು ಅಂದಾಜಾಗಿದೆ?

ಶ್ರೀ ಆಲೂರು ಹನುಮಂತಪ್ಪ.—ಮೊದಲು ಪ್ರಾರಂಭವಾದಾಗ 10,180 ಎಕರೆಗೆ ಒದಗಿಸ ಬೇಕೆಂದು ಇದ್ದುದು ಈಗ 21,500 ಎಕರೆಗೆ ಡೆವಲಪ್ ಆಗಿದೆ.

ಶ್ರೀ ಬಿ. ಎಲ್. ಗೌಡ.—ಈಗ 59 ಪಂಪುಸೆಟ್ಟುಗಳಿಗೆ ಏಕೆ ಹೆಚ್ಚಾಗಿ ಪರ್‌ಮಿಷನ್ ಕೊಟ್ಟಿದ್ದೀರಿ?

ಶ್ರೀ ಆಲೂರು ಹನುಮಂತಪ್ಪ.—ಪರ್‌ಮಿಷನ್ ಕೊಟ್ಟಿರುವುದು 97ಕ್ಕೆ, ಆದರೆ 59 ಪಂಪು ಸೆಟ್ಟುಗಳನ್ನು ಅನಧಿಕೃತವಾಗಿ ಹಾಕಿಕೊಂಡಿದ್ದಾರೆ.

ಶ್ರೀ ಬಿ. ಎಲ್. ಗೌಡ.—ಇಲ್ಲಿ ಮುಖ್ಯ ಮಂತ್ರಿಗಳು ಇದ್ದಾರೆ ಅವರಿಗೂ ದೂರುಗಳು ಬಂದಿರಬಹುದು. ಅಲ್ಲದೆ ಅವರು ನಮ್ಮೂರಿಗೆ ಬಂದಾಗಲೂ ಹೇಳಿದ್ದೆ.. ಆಗ ಅವರು ಅನಧಿಕೃತವಾಗಿ ಪಂಪುಸೆಟ್ಟುಗಳನ್ನು ಹಾಕಿರುವುದನ್ನು ಕಿತ್ತುಹಾಕಿಸುತ್ತೇನೆಂದು ಹೇಳಿದ್ದರು. ಆದರೆ ಈವರೆಗೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲವೇಕೆ?

ಶ್ರೀ ಎಸ್. ನಿಜಲಿಂಗಪ್ಪ.—ದೂರುಗಳು ಬಂದಿರುವುದು ನಿಜ. ಆಪ್ಪಣೆ ಕೊಡಿಸಿರುವುದು ನಿಜವೇ? ಕೆಲವನ್ನು ಕಿತ್ತುಹಾಕಿಸಿದ್ದೇವೆ. ಕೆಲವನ್ನು ಕಿತ್ತು ಹಾಕಿಸಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಬುದ್ಧಿವಂತಿಕೆಯಿಂದ ಹೋಗಿ ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ.

ಶ್ರೀ ವಿ. ಮಸಿಯಪ್ಪ.—ಮದ್ರಾಸ್ ರಾಜ್ಯದ ಮೆಟ್ಟೂರ್ ಡ್ಯಾಮ್ ಕೆಳಗೆ ಇರುವ ಹಳ್ಳಿಯವರು ಪಂಪುಸೆಟ್ಟುಗಳನ್ನು ಹಾಕಿಕೊಂಡು ನೀರನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಆರ್ಡರ್ ಮಾಡಿ ಪರ್‌ಮಿಷನ್ ಕೊಟ್ಟಿರುವುದು ನಿಜವೇ? ಇದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಈ ವಿಚಾರವಾಗಿ ಸರ್ಕಾರದ ಗಮನಕ್ಕೆ ಏನೂ ಬಂದಿಲ್ಲ. ಅಲ್ಲಿಯ ಪುರಪ್ರಮುಖರು ಕೆಲವರು ಇದನ್ನು ದುರುಪಯೋಗ ಮಾಡುವುದನ್ನು ತಪ್ಪಿಗಟ್ಟುವುದಕ್ಕೆ ಕೆಲವು ನೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಈ ತರದ ತೊಂದರೆಗಳು ಇಲ್ಲದಂತೆ ಮಾಡಲು ವಾಣೀವಿಲಾಸಸಾಗರದಿಂದ ನೀರನ್ನು ಡೈವರ್ಟ್ ಮಾಡುವುದಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ಅಷ್ಟು ಸುಲಭವಾದ ಕೆಲಸವಲ್ಲ. ಮೊದಲು ಇದಕ್ಕೆ 5 ಕೋಟಿ ರೂಪಾಯಿಗಳ ಅಂದಾಜು ಇದ್ದದ್ದು ಈಗ 8 ಕೋಟಿ ರೂಪಾಯಿಗಳಿಗೆ ಬಂದಿದೆ. ಒಂದು ವ್ಯಾಲಿಯಿಂದ ಇನ್ನೊಂದುವ್ಯಾಲಿಗೆ ನೀರನ್ನು ಡೈವರ್ಟ್ ಮಾಡತಕ್ಕಂಥದ್ದು ಅಷ್ಟು ಸುಲಭವಾದ ಕೆಲಸವಲ್ಲ. ಅಂದರೆ ಇನ್ನು 4—5 ವರ್ಷಗಳಾದರೂ ಆಗಬಹುದು.

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ಈ ಅನಧಿಕೃತವಾಗಿ ಪಂಪುಸೆಟ್ಟುಗಳನ್ನು ಹಾಕಿಕೊಂಡಿರುವವರಿಗೆ ಪೈರು ಒಣಗದಂತೆ ಸ್ವಲ್ಪವಾದರೂ ನೀರನ್ನು ಒದಗಿಸಲು ಭರವಸೆ ಕೊಡುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಈಗ ಒಂದು ಹೊಸ ನೀತಿಯನ್ನು ಹಾಕಿಕೊಂಡಿದ್ದೇವೆ. ಅವರಲ್ಲಿರುವ ನೀರನ್ನು ಉಪಯೋಗಿಸಲು ಸ್ವಲ್ಪ ಕಂಜೈರ್ ಮಾಡುತ್ತೇವೆ. ಆದ್ದರಿಂದ ಅವರ ಪೈರಿಗೆ ಅಷ್ಟೇನೂ ನಷ್ಟವಾಗುವುದಿಲ್ಲವೆಂದು ನಂಬಿದ್ದೇನೆ.

ಅಧ್ಯಕ್ಷರು.—ಶ್ರೀ ಎಸ್. ಎ. ವಾಸನ್ನಶೆಟ್ಟಿಯವರ ಪರವಾಗಿ ಶ್ರೀ ಎಚ್. ಆರ್. ಕೇಶವ ಮೂರ್ತಿಯವರು ಪ್ರಶ್ನೆ ಹಾಕಬಹುದು.

Timber Smuggling Cases.

*Q.—44. Sri H. R. KASHAVA MURTHY (Gandasi) [On behalf of SRI S. A. VASANNA SETTY (Saklespur)].—

Will the Government be pleased to state :—

(*a*) the total number of timber smuggling cases componded by Saklespur Forest Range Office and the total amount collected as fine for the past 3 years ;

(*b*) whether it is a fact that there are no forest check posts between Sukravarsanthe—Kattaya Road to Mysore ;

(*c*) whether any representation has been made to Government by the Department to have a check post on this road as lot of timber is smuggled in that area ?

A.—Sri B. RACHAIAH (Minister for Forests and Fisheries).—

(*a*) *Year*		*No.*		*Amount*	
				Rs.	P.
1962–63	...	41	...	6,525	96
1963–64	...	42	...	4,823	28
1964–65	...	33	...	4,734	56

(*b*) Yes.

(*c*) No.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಾಮಾನ್ಯವಾಗಿ ಗಂಧದಮರ ಮತ್ತು ಚಾಬೀನೆ ಕಳ್ಳ ಸಾಗಾಣಿಕೆಯಾಗುತ್ತಿದ್ದರೂ ಇದು ಇರಾಬೆಯವರಿಗೆ ಗೊತ್ತಿದ್ದರೂ ನಮ ಏತಕ್ಕೋಸ್ಕರ ಅದನ್ನು ತಡೆಗಟ್ಟಲು ಅಲ್ಲಿ ಚೆಕ್‌ಪೋಸ್ಟ್ ಹಾಕಿಲ್ಲ, ದಯವಿಟ್ಟು ತಿಳಿಸಬೇಕು ?